All India Radio: Bangalore
National Bulletin In Kannada
01.05.2025 7.35 a.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
01.05.2025 7.35 a.m.
**<><><><>**

ಮುಖ್ಯಾಂಶಗಳು

- ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಮಹತ್ವ ೪೬ನೇ ಆವೃತ್ತಿಯ ಪ್ರಗತಿ ಸಭೆ ; ೮ ಮಹತ್ವದ ಯೋಜನೆಗಳ ಪರಾಮರ್ಶೆ
- ಇಂದಿನಿಂದ ಮುಂಬೈನಲ್ಲಿ ವಿಶ್ವ ಶ್ರವಣ, ದೃಶ್ಯ ಮತ್ತು ಮನೋರಂಜನೆ ಶೃಂಗಸಭೆ- ವೇವ್ಸ್‌ಗೆ ಚಾಲನೆ ; ದೇಶ-ವಿದೇಶಗಳ ಗಣ್ಯರು ಭಾಗಿ
- ಪಹಲ್ಗಾಮ್ ಭಯೋತ್ಪಾದಕ ದಾಳಿ ಹಿನ್ನೆಲೆ ; ಪಾಕಿಸ್ತಾನ ವಿಮಾನಗಳ ಹಾರಾಟಕ್ಕೆ ದೇಶದ ವಾಯುನೆಲೆಗಳು ಬಂದ್
- ೨ನೇ ಇಂಡಿಯನ್ ಓಪನ್ ರಿಲೆ ಕ್ರೀಡಾಕೂಟ ; ೪x೧೦೦ ರಿಲೆನಲ್ಲಿ ರಾಷ್ಟ್ರೀಯ ದಾಖಲೆ

<><><><>

ಪ್ರಧಾನಿ ನರೇಂದ್ರ ಮೋದಿ ನಿನ್ನೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಒಳಗೊಂಡ ಐಸಿಟಿ ಆಧಾರಿತ ಬಹು-ಮಾದರಿ ವೇದಿಕೆಯಾದ ೪೬ನೇ ಆವೃತ್ತಿಯ ಪ್ರಗತಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ, ಮೂರು ರಸ್ತೆ ಯೋಜನೆಗಳು, ರೈಲ್ವೆ ಮತ್ತು ಬಂದರು, ಹಡಗು ಮತ್ತು ಜಲಮಾರ್ಗಗಳ ತಲಾ ಎರಡು ಯೋಜನೆಗಳು ಸೇರಿದಂತೆ ಎಂಟು ಮಹತ್ವದ ಯೋಜನೆಗಳನ್ನು ಪರಿಶೀಲಿಸಲಾಯಿತು. ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿನ ಈ ಯೋಜನೆಗಳ ಒಟ್ಟು ವೆಚ್ಚ ಸುಮಾರು ೬೦ ಸಾವಿರ ಕೋಟಿ ರೂಪಾಯಿಗಳು. ಎಲ್ಲಾ ಸಚಿವಾಲಯಗಳು ಮತ್ತು ಇಲಾಖೆಗಳು ಫಲಾನುಭವಿಗಳನ್ನು ಕಟ್ಟುನಿಟ್ಟಾಗಿ ಬಯೋಮೆಟ್ರಿಕ್ಸ್ ಆಧಾರಿತ ಆಧಾರ್ ದೃಢೀಕರಣ ಅಥವಾ ಪರಿಶೀಲನೆಯ ಮೂಲಕ ಗುರುತಿಸಬೇಕು ಎಂದು ಪ್ರಧಾನಿ ಅವರು ಸಭೆಯಲ್ಲಿ ನಿರ್ದೇಶನ ನೀಡಿದ್ದಾರೆ. ಪ್ರಧಾನಮಂತ್ರಿ ಮಾತೃ ವಂದನಾ ಯೋಜನೆಯಲ್ಲಿ ಹೆಚ್ಚುವರಿ ಕಾರ್ಯಕ್ರಮಗಳನ್ನು ಸಂಯೋಜಿಸುವ ಜೊತೆಗೆ ಮಕ್ಕಳ ಆರೈಕೆಯನ್ನು ಉತ್ತೇಜಿಸಬೇಕು. ಆರೋಗ್ಯ ಮತ್ತು ನೈರ್ಮಲ್ಯ ಅಭ್ಯಾಸಗಳನ್ನು ಸುಧಾರಿಸುವ, ಶುಚಿತ್ವವನ್ನು ಖಚಿತಪಡಿಸಿಕೊಳ್ಳುವ ಮತ್ತು ತಾಯಿ ಮತ್ತು ನವಜಾತ ಶಿಶುವಿನ ಒಟ್ಟಾರೆ ಯೋಗಕ್ಷೇಮಕ್ಕೆ ಆದ್ಯತೆ ನೀಡಬೇಕು ಎಂದು ಹೇಳಿದರು.  ವರ್ತುಲ ರಸ್ತೆಗಳನ್ನು ಮುಂದಿನ ೨೫ ರಿಂದ ೩೦ ವರ್ಷಗಳಲ್ಲಿ ನಗರದ ಬೆಳವಣಿಗೆಯ ಪಥಕ್ಕೆ ಹೊಂದಿಕೆಯಾಗುವಂತೆ ರೂಪಿಸಬೇಕು. ಸಾರ್ವಜನಿಕ ಸಾರಿಗೆಗೆ ಪೂರಕ ಮತ್ತು ಸುಸ್ಥಿರ ಪರ್ಯಾಯವಾಗಿ ನಗರದ ಸಾರಿಗೆ ವಲಯದಲ್ಲಿ ಮೂಲಸೌಕರ್ಯ ವೃದ್ಧಿ, ವರ್ತುಲ ರೈಲ್ವೆ ಜಾಲವನ್ನು ವಿಸ್ತರಿಸಲು ಒತ್ತು ನೀಡಬೇಕು ಎಂದು  ಹೇಳಿದ್ದಾರೆ.

<><><><>

ಪ್ರಧಾನಿ ನರೇಂದ್ರ ಮೋದಿ ಇಂದಿನಿಂದ ಎರಡು ದಿನಗಳ ಕಾಲ ಮಹಾರಾಷ್ಟ್ರ, ಕೇರಳ, ಆಂಧ್ರಪ್ರದೇಶ ಪ್ರವಾಸ ಕೈಗೊಳ್ಳಲಿದ್ದಾರೆ. ಇಂದು ಮುಂಬೈಗೆ ಭೇಟಿ ನೀಡಿ, ವಿಶ್ವ ಶ್ರವಣ ದೃಶ್ಯ ಮತ್ತು ಮನರಂಜನಾ ಶೃಂಗಸಭೆ - ವೇವ್ಸ್‌ಅನ್ನು ಉದ್ಘಾಟಿಸಲಿದ್ದು, ತಮ್ಮ ೨ನೇ ದಿನದ ಪ್ರವಾಸದಲ್ಲಿ ಅವರು, ಕೇರಳಗೆ ತೆರಳಿ, ವಿಝಿನ್‌ಜಾಂ ಅಂತಾರಾಷ್ಟ್ರೀಯ ಆಳ ನೀರಿನ ಬಹುಪಯೋಗಿ ಬಂದರನ್ನು ರಾಷ್ಟ್ರಕ್ಕೆ ಸಮರ್ಪಿಸಲಿದ್ದಾರೆ. ಇದು ದೇಶದ ಮೊದಲ ಮೀಸಲಾದ ಕಂಟೈನರ್ ಟ್ರಾನ್ಸ್‌ಶಿಫ್‌ಮೆಂಟ್ ಬಂದರು ಆಗಿದ್ದು, ವಿಕಸಿತ ಭಾರತದೆಡೆಗಿನ ಹಾದಿಯಲ್ಲಿ ಕಡಲ ವಲಯದಲ್ಲಿ ಕೈಗೊಳ್ಳಲಾಗುತ್ತಿರುವ ಪರಿವರ್ತನಾತ್ಮಕ ಪ್ರಗತಿಯನ್ನು ಇದು ಪ್ರತಿಬಿಂಬಿಸುತ್ತದೆ. ಇದೇ ವೇಳೆ ಪ್ರಧಾನಿ ಸಭೆಯನ್ನುದ್ದೇಶಿಸಿ ಮಾತನಾಡಲಿದ್ದಾರೆ. ನಂತರ ಅಮರಾವತಿಯಲ್ಲಿ ಅವರು, ೫೮ ಸಾವಿರ ಕೋಟಿ ರೂಪಾಯಿಗೂ ಅಧಿಕ ಮೊತ್ತದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಉದ್ಘಾಟನೆ, ಶಿಲಾನ್ಯಾಸ ನೆರವೇರಿಸಲಿದ್ದಾರೆ. ದೇಶಾದ್ಯಂತ ವಿಶ್ವದರ್ಜೆಯ ಮೂಲಸೌಕರ್ಯ ಹಾಗೂ ಸಂಪರ್ಕ ಖಚಿತಪಡಿಸಿಕೊಳ್ಳುವ ತಮ್ಮ ಧ್ಯೇಯದ ಭಾಗವಾಗಿ ಆಂಧ್ರಪ್ರದೇಶದಲ್ಲಿ ಏಳು ರಾಷ್ಟ್ರೀಯ ಹೆದ್ದಾರಿಗಳನ್ನು ಪ್ರಧಾನ ಉದ್ಘಾಟಿಸಲಿದ್ದಾರೆ.

<><><>

ವಿಶ್ವ ಶ್ರವಣ, ದೃಶ್ಯ ಮತ್ತು ಮನೋರಂಜನೆ ಶೃಂಗಸಭೆ-ವೇವ್ಸ್ ಇಂದು ಮುಂಬೈನ ಜಿಯೋ ವರ್ಲ್ಡ್ ಕನ್ವೆನ್ಷನ್ ಸೆಂಟರ್‌ನಲ್ಲಿ ಪ್ರಾರಂಭವಾಗಲಿದೆ. ನಾಲ್ಕು ದಿನಗಳ ಕಾಲ ನಡೆಯಲಿರುವ ಈ ಶೃಂಗಸಭೆಯನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದಾರೆ. ಈ ಶೃಂಗಸಭೆ ಶ್ರವಣ-ದೃಶ್ಯ ಮತ್ತು ಮನರಂಜನಾ ಉದ್ಯಮದ ಭವಿಷ್ಯದ ಕುರಿತು ಚರ್ಚೆಗಳಿಗೆ ಜಾಗತಿಕ ವೇದಿಕೆಯನ್ನು ಒದಗಿಸಲಿದೆ. ಜಾಗತಿಕ ಮಾಧ್ಯಮ ಸಂವಾದಗಳು, ಖರೀದಿದಾರರು ಮತ್ತು ಮಾರಾಟಗಾರರ ನಡುವಿನ ಭೇಟಿಗಳು, ಉದಯೋನ್ಮುಖ ಪ್ರತಿಭೆಗಳ ಮತ್ತು ಹೊಸ ತಲೆಮಾರಿನ ಕಥನ ಶೈಲಿಗಳ ಪ್ರದರ್ಶನಗಳಿಗೆ ವೇದಿಕೆಯಾಗಿ ಶೃಂಗಸಭೆ ಕಾರ್ಯನಿರ್ವಹಿಸಲಿದೆ. ವೇವ್ಸ್ ಶೃಂಗಸಭೆಯು, ಭಾರತದ ಮನೋರಂಜನೆ ಮತ್ತು ಸೃಜನಶೀಲತೆಯ ಅಗಾಧ ಸಾಮರ್ಥ್ಯವನ್ನು ಜಗತ್ತಿಗೆ ಪ್ರದರ್ಶಿಸಲು ಗಮನಾರ್ಹ ಅವಕಾಶವನ್ನು ಒದಗಿಸುತ್ತದೆ ಎಂದು ಆಕಾಶವಾಣಿ ವರದಿಗಾರರು ವರದಿ ಮಾಡಿದ್ದಾರೆ. ವೇವ್ಸ್ ವಿಶ್ವದ ಉನ್ನತ ಮಾಧ್ಯಮ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಪ್ರಮುಖ ಮನರಂಜನಾ ರಾಯಭಾರಿ ಮತ್ತು ಜಗತ್ತಿನಾದ್ಯಂತದ ಸೃಜನಶೀಲರನ್ನು ಒಟ್ಟುಗೂಡಿಸುತ್ತದೆ. ನೂರು ದೇಶಗಳಿಂದ ಸುಮಾರು ಐದು ಸಾವಿರ ಪ್ರತಿನಿಧಿಗಳು ಶೃಂಗಸಭೆಯಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ಮನರಂಜನಾ ನವೋದ್ಯಮಗಳು ತಮ್ಮ ಆಲೋಚನೆಗಳನ್ನು ಜಾಗತಿಕ ಪ್ರೇಕ್ಷಕರಿಗೆ ಪ್ರಸ್ತುತಪಡಿಸಲು ಮತ್ತು ಹೂಡಿಕೆದಾರರು ಮತ್ತು ಉದ್ಯಮದ ನಾಯಕರೊಂದಿಗೆ ಸಂಪರ್ಕ ಸಾಧಿಸಲು ಅವಕಾಶವನ್ನು ಒದಗಿಸುತ್ತದೆ.

ಚಲನಚಿತ್ರರಂಗದ ಪ್ರಸಿದ್ಧ ನಟರಾದ ಅಮಿತಾಬ್ ಬಚ್ಚನ್, ರಜನಿಕಾಂತ್, ಚಿರಂಜೀವಿ, ಮೋಹನ್ ಲಾಲ್, ನಾಗಾರ್ಜುನ, ಶಾರುಖ್ ಖಾನ್, ಅನಿಲ್ ಕಪೂರ್, ಅಕ್ಷಯ್ ಕುಮಾರ್ ಮತ್ತು ಅಮೀರ್ ಖಾನ್ ಸೇರಿದಂತೆ ಹಲವು ಕಲಾವಿದರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

<><><>

ಪಹಲ್ಗಾಮ್ ಭಯೋತ್ಪಾದಕ ದಾಳಿ ಹಿನ್ನೆಲೆಯಲ್ಲಿ ಭಾರತ-ಪಾಕಿಸ್ತಾನದ ವಿಮಾನಗಳ ಹಾರಾಟಕ್ಕೆ ತನ್ನ ವಾಯುನೆಲೆಗಳನ್ನು ಬಂದ್ ಮಾಡಿದೆ. ಮೇ ೨೩ರವರೆಗೆ ಈ ಆದೇಶ ಅನ್ವಯವಾಗಲಿದೆ. ಈ ಅವಧಿಯಲ್ಲಿ ಪಾಕಿಸ್ತಾನದಲ್ಲಿ ನೋಂದಣಿಯಾಗಿರುವ ವಿಮಾನಗಳು, ಕಾರ್ಯಾಚರಣೆ ನಡೆಸುತ್ತಿರುವ ಪಾಕಿಸ್ತಾನಿ ಮೂಲದ ವಿಮಾನಗಳು ಹಾಗೂ ಸೇನಾ ವಿಮಾನಗಳಿಗೆ ಭಾರತ ತನ್ನ ವಾಯುನೆಲೆಗಳನ್ನು ಬಂದ್‌ಮಾಡಿದೆ ಎಂದು ನಾಗರಿಕ ವಿಮಾನಯಾನ ಸಚಿವಾಲಯ ತಿಳಿಸಿದೆ.

<><><><>

ಪಹಲ್ಗಾಮ್ ಭಯೋತ್ಪಾದಕ ದಾಳಿ ಕುರಿತು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಅವರ ಪತಿ ರಾಬರ್ಟ್ ವಾದ್ರಾ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಕೋರಿ ಸಲ್ಲಿಸಲಾದ ಅರ್ಜಿಯ ವಿಚಾರಣೆಯನ್ನು ಅಲಹಾಬಾದ್ ಹೈಕೋರ್ಟ್ ನಾಳೆ ನಡೆಸಲಿದೆ. ಹಿಂದೂ ಫ್ರಂಟ್ ಫಾರ್ ಜಸ್ಟೀಸ್ ಮತ್ತು ಇತರರು ಹೈಕೋರ್ಟ್‌ನ ಲಕ್ನೋ ಪೀಠಕ್ಕೆ ಅರ್ಜಿ ಸಲ್ಲಿಸಿದ್ದಾರೆ. ವಾದ್ರಾ ಹೇಳಿಕೆಗಳ ತನಿಖೆಗೆ ವಿಶೇಷ ತನಿಖಾ ತಂಡ - ಐಸ್‌ಐಟಿ ರಚಿಸುವಂತೆ ಕೇಂದ್ರಕ್ಕೆ ನಿರ್ದೇಶನ ನೀಡಬೇಕು. ಭಾರತೀಯ ನ್ಯಾಯ ಸಂಹಿತಾ -ಬಿಎನ್‌ಎಸ್‌ನ ವಿವಿಧ ವಿಭಾಗಗಳ ಅಡಿಯಲ್ಲಿ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ನ್ಯಾಯಾಲಯಕ್ಕೆ ಮನವಿ ಮಾಡಲಾಗಿದೆ.

<><><><>

ಜಮ್ಮು ಮತ್ತು ಕಾಶ್ಮೀರದಲ್ಲಿ, ಈ ವರ್ಷ ಹಜ್ ಯಾತ್ರೆಗಾಗಿ ಶ್ರೀನಗರದಿಂದ ಹೊರಡಲಿರುವ ಯಾತ್ರಿಕರ ಮೊದಲ ತಂಡದ ವಿಮಾನ ವೇಳಾಪಟ್ಟಿಯನ್ನು ಹಜ್ ಸಮಿತಿ ಪ್ರಕಟಿಸಿದೆ. ಮೊದಲ ವಿಮಾನ ಮೇ ೪ ರಂದು ಹೊರಡಲಿದೆ. ಈ ವಿಮಾನದಲ್ಲಿ ಪ್ರಯಾಣಿಸುವ ಯಾತ್ರಿಕರು ನಿರ್ಗಮನದ ದಿನದಂದು ಬೆಳಿಗ್ಗೆ ೫:೦೦ ರಿಂದ ಬೆಳಿಗ್ಗೆ ೫:೩೦ ರವರೆಗೆ ಶ್ರೀನಗರದ ಬೆಮಿನಾದ ಹಜ್ ಹೌಸ್‌ನಲ್ಲಿ ವರದಿ ಮಾಡಿಕೊಳ್ಳಲು ಸೂಚಿಸಲಾಗಿದೆ. ಈ ವರ್ಷ ಜಮ್ಮು ಮತ್ತು ಕಾಶ್ಮೀರದಿಂದ ೩ ಸಾವಿರದ ೬೦೦ ಕ್ಕೂ ಹೆಚ್ಚು ಯಾತ್ರಿಕರು ಸರ್ಕಾರಿ ಕೋಟಾದಡಿಯಲ್ಲಿ ಹಜ್ ಯಾತ್ರೆ ಮಾಡಲು ನಿರ್ಧರಿಸಲಾಗಿದೆ.

<><><><>

ಕೋಲ್ಕತಾದ ಮೆಚು ಪಟ್ಟಿ ಪ್ರದೇಶದ ಹೋಟೆಲ್ ನಲ್ಲಿ ನಿನ್ನೆ ರಾತ್ರಿ ಸಂಭವಿಸಿರುವ ಅಗ್ನಿ ಅವಘಡದಲ್ಲಿ ಓರ್ವ ಮಹಿಳೆ, ಇಬ್ಬರು ಮಕ್ಕಳು ಸೇರಿದಂತೆ ೧೪ ಮಂದಿ ಮೃತಪಟ್ಟಿದ್ದಾರೆ. ದುರ್ಘಟನೆಯಲ್ಲಿ ೧೩ ಮಂದಿ ಗಾಯಗೊಂಡಿದ್ದು, ಆಸ್ಪತ್ರೆಗಳಲ್ಲಿ ಚಿಕಿತ್ಸೆ ಮುಂದುವರಿದಿದೆ. ಈ ಮಧ್ಯೆ ಆಂಧ್ರಪ್ರದೇಶದ ಸಿಂಹಾಚಲಂನಲ್ಲಿ ದೇವಾಲಯದ ಗೋಡೆ ಕುಸಿದು ೮ ಮಂದಿ ಮೃತಪಟ್ಟು, ಹಲವರು ಗಾಯಗೊಂಡಿರುವ ಘಟನೆ ವರದಿಯಾಗಿದೆ. ಈ ದುರಂತಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ತಮ್ಮ ಸಂದೇಶದಲ್ಲಿ ಅವರು, ಮೃತರ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದ್ದು, ಗಾಯಾಳುಗಳು ಶೀಘ್ರ ಚೇತರಿಸಿಕೊಳ್ಳುವಂತೆ ಪ್ರಾರ್ಥಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ, ಘಟನೆಗೆ ತೀವ್ರ ದುಃಖ ವ್ಯಕ್ತಪಡಿಸಿದ್ದು, ಮೃತರ ಕುಟುಂಬಗಳಿಗೆ ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ ೨ ಲಕ್ಷ ರೂಪಾಯಿ, ಗಾಯಾಳುಗಳಿಗೆ ೫೦ ಸಾವಿರ ರೂಪಾಯಿ ಪರಿಹಾರ ಘೋಷಿಸಿದ್ದಾರೆ.

<><><><>

ಬಾಂಗ್ಲಾದೇಶದಲ್ಲಿ ಬಂಧನದಲ್ಲಿರುವ ಇಸ್ಕಾನ್‌ನ ಮಾಜಿ ಕಾರ್ಯಕರ್ತ ಹಾಗೂ ಭಾರತೀಯ ಮೂಲದ ಚಿನ್ಮೊಯ್ ಕೃಷ್ಣದಾಸ್ ಅವರಿಗೆ ಅಲ್ಲಿನ ಹೈಕೋರ್ಟ್ ನೀಡಿದ್ದ ಜಾಮೀನು ಆದೇಶಕ್ಕೆ ಸುಪ್ರೀಂಕೋರ್ಟ್ ತಡೆ ನೀಡಿದೆ.

ದೇಶದ್ರೋಹ ಪ್ರಕರಣದಲ್ಲಿ ಅವರಿಗೆ ಜಾಮೀನು ದೊರೆತಿತು. ಆದರೆ ಸುಪ್ರೀಂಕೋರ್ಟ್‌ನ ವಿಭಾಗೀಯ ಪೀಠ ಸರ್ಕಾರದ ವಾದ ಪುರಸ್ಕರಿಸಿ ಈ ಆದೇಶಕ್ಕೆ ತಡೆಯಾಜ್ಞೆ ನೀಡಿದೆ. ಕಳೆದ ನವೆಂಬರ್ ೨೫ ಚಿನ್ಮೊಯ್ ಕೃಷ್ಣದಾಸ್ ಅವರನ್ನು ಬಂಧಿಸಲಾಗಿತ್ತು.

<><><><>

ಚಂಡಿಗಢದಲ್ಲಿ ನಿನ್ನೆ ನಡೆದ ೨ನೇ ಇಂಡಿಯನ್ ಓಪನ್ ರಿಲೆ ಕ್ರೀಡಾಕೂಟದಲ್ಲಿ ಅಥ್ಲೀಟ್‌ಗಳಾದ ಗುರಿಂದರ್ ವೀರ್ ಸಿಂಗ್, ಅನಿಮೇಷ್ ಕುಜೂರ್, ಮಣಿಕಂಠ ಓಬ್ಲಿದಾರ್ ಮತ್ತು ಅಮ್ಲಾನ್ ಬೊರ್ಗೊಹೆನ್ ತಂಡ ೪ಥ೧೦೦ ರಿಲೆನಲ್ಲಿ ರಾಷ್ಟ್ರೀಯ ದಾಖಲೆ ನಿರ್ಮಿಸಿದೆ. ಈ ತಂಡ ೩೮.೬೯ ಸೆಕೆಂಡ್‌ಗಳಲ್ಲಿ ಗುರಿ ತಲುಪಿ ದಾಖಲೆ ಬರೆದಿದೆ. ೨೦೧೦ರಲ್ಲಿ ದೆಹಲಿಯಲ್ಲಿ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಇದ್ದ ೩೮.೮೯ ಸೆಕೆಂಡ್‌ಗಳ ದಾಖಲೆಯನ್ನು ಈ ತಂಡ ಅಳಿಸಿಹಾಕಿದೆ.

<><><><>

ಚೆನ್ನೈನ ಎಂಎ ಚಿದಂಬರಂ ಕ್ರೀಡಾಂಗಣದಲ್ಲಿ ನಿನ್ನೆ ರಾತ್ರಿ ನಡೆದ ಐಪಿಎಲ್ ಟಿ೨೦ ಕ್ರಿಕೆಟ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ೪ ವಿಕೆಟ್‌ಗಳಿಂದ ಸೋಲಿಸಿತು. ಜೈಪುರದ ಸವಾಯ್ ಮಾನ್ ಸಿಂಗ್ ಕ್ರೀಡಾಂಗಣದಲ್ಲಿಂದು ರಾಜಸ್ಥಾನ್ ರಾಯಲ್ಸ್ ಮತ್ತು ಮುಂಬೈ ಇಂಡಿಯನ್ಸ್ ವಿರುದ್ಧ ಸೆಣಸಲಿದೆ. ಪಂದ್ಯ ಸಂಜೆ ೦೭:೩೦ ಕ್ಕೆ ಆರಂಭವಾಗಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>